# ನಿಷ್ಠಾಭಕ್ತಿ



❖ ಸಾಕಾರ ನಿರಾಕಾರ ಎರಡೂ ಸತ್ಯ. ಭಗವಂತ ಕೇವಲ ನಿರಾಕಾರ ಎಂಬುದು ಹೇಗೆ ಕಾಣುತ್ತದೆ ಗೊತ್ತೆ? ಇದು ಓಲಗ ಊದುವಾಗ ಓಲಗದಲ್ಲಿ ಏಳು ರಂಧ್ರಗಳಿದ್ದರೂ ಒಬ್ಬ ಕೇವಲ 'ಪ್ಣೋ' ಅಂತ ರಾಗ ಹೊರಡಿಸುತ್ತಾನಲ್ಲ ಹಾಗೆ. ಆದರೆ ಇನ್ನೊಬ್ಬನನ್ನು ನೋಡಿ, ಆತ ಎಷ್ಟೊಂದು ವಿವಿಧ ರಾಗ ರಾಗಿಣಿಗಳನ್ನು ನುಡಿಸುತ್ತಾನೆ! ಅದೇ ರೀತಿಯಾಗಿ, ಹಾಗೇ ನೋಡಿ, ಸಾಕಾರವಾದಿಗಳು ಭಗವಂತನನ್ನು ಎಷ್ಟೊಂದು ವಿಧದಿಂದ ಪೂಜಿಸಿ ಆನಂದಪಡುತ್ತಾರೆ! ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮಧುರ ಹೀಗೆ ನಾನಾ ಭಾವಗಳಿಂದ!

❖ ವ್ಯಾಕುಲತೆ ಇತ್ತು ಎಂದರೆ ಎಲ್ಲಾ ಮಾರ್ಗದಿಂದಲೂ ಭಗವಂತನ ಸಾಕ್ಷಾತ್ಕಾರ ಪಡೆಯಬಹುದು. ಆದರೆ ನಿಷ್ಠೆ ಬೇಕು.

❖ ಒಮ್ಮೆ ಪಾಂಡವರು ರಾಜಸೂಯ ಯಾಗವನ್ನು ಮಾಡಿದರು. ಆಗ ರಾಜರೆಲ್ಲರೂ ಕೂಡಿ ಯುಧಿಷ್ಠಿರನನ್ನು ಸಿಂಹಾಸನದ ಮೇಲೆ ಕೂರಿಸಿ ಆತನಿಗೆ ಪ್ರಣಾಮ ಮಾಡಿದರು. ವಿಭೀಷಣ ಹೇಳಿದ: 'ನಾನು ಶ್ರೀಮನ್ನಾರಾಯಣನಿಗೆ ಒಬ್ಬನಿಗೆ ವಿನಾ ಬೇರೆ ಯಾರಿಗೂ ಪ್ರಣಾಮ ಮಾಡುವುದಿಲ್ಲ' ಎಂದು. ಆಗ ಶ್ರೀಕೃಷ್ಣನೇ ಯುಧಿಷ್ಠಿರನಿಗೆ ಸಾಷ್ಟಾಂಗ ಪ್ರಣಾಮ ಮಾಡಿದ. ಆಗ ಮಾತ್ರವೇ ವಿಭೀಷಣ ಕಿರೀಟ ಸಮೇತ ಯುಧಿಷ್ಠಿರನಿಗೆ ಸಾಷ್ಟಾಂಗ ಪ್ರಣಾಮ ಮಾಡಿದ.

❖ ನಿಷ್ಠಾಭಕ್ತಿ ಯಾವ ರೀತಿಯದು ಗೊತ್ತೆ? ಇದು ಮನೆಯಲ್ಲಿ ಸೊಸೆಯ ವ್ಯವಹಾರದ ಹಾಗೆ. ಆಕೆ ಭಾವ, ಮೈದುನ, ಮಾವ, ಗಂಡ ಎಲ್ಲರಿಗೂ ಕಾಲು ತೊಳೆಯುವುದಕ್ಕೆ ನೀರು, ಕೈ ಬಾಯಿ ಒರೆಸಿಕೊಳ್ಳುವುದಕ್ಕೆ ವಸ್ತ್ರ, ಕುಳಿತುಕೊಳ್ಳುವುದಕ್ಕೆ ಮಣೆ, ಇನ್ನೂ ಏನೇನೋ ರೀತಿಯಾಗಿ ಸೇವೆ ಮಾಡುತ್ತಾಳೆ. ಆದರೆ ತನ್ನ ಪತಿಯೊಡನೆ ಬೇರೆ ಸಂಬಂಧ ಇಟ್ಟುಕೊಂಡಿರುತ್ತಾಳೆ.

❖ ಈ ಪ್ರೇಮಾಭಕ್ತಿಯಲ್ಲಿ 'ಅಹಂಕಾರ', 'ಮಮಕಾರ' ಎರಡೂ ಇವೆ. ಯಶೋದೆ ಭಾವಿಸುತ್ತಿದ್ದಳು: 'ನಾನು ಗೋಪಾಲನ ಯೋಗಕ್ಷೇಮ ನೋಡಿಕೊಳ್ಳದಿದ್ದರೆ, ಬೇರೆ ಯಾರು ತಾನೆ ನೋಡಿಕೊಳ್ಳುತ್ತಿದ್ದರು? ನಾನು ನೋಡಿಕೊಳ್ಳದಿದ್ದರೆ ಅವನು ಕಾಯಿಲೆ ಬಿದ್ದು ಬಿಡುತ್ತಾನೆ.' ಶ್ರೀಕೃಷ್ಣ ಸಾಕ್ಷಾತ್ ಭಗವಂತ ಎಂಬ ಬೋಧೆ ಯಶೋದೆಗಿರಲಿಲ್ಲ. ಎರಡನೆಯದು 'ಮಮಕಾರ'. ಭಗವಂತ ತನ್ನವನು ಎಂದು ಭಾವಿಸುವುದು –'ನನ್ನ ಗೋಪಾಲ' ಎಂದು ಭಾವಿಸುವಿಕೆ. ಉದ್ಧವ ಯಶೋದೆಗೆ ತಿಳಿಸಿದ: 'ತಾಯೆ, ನಿಮ್ಮ ಕೃಷ್ಣ ಸಾಕ್ಷಾತ್ ಭಗವಂತನೇ; ಜಗಚ್ಚಿಂತಾಮಣಿಯೇ. ಆತ ಸಾಮಾನ್ಯ ಮನುಷ್ಯನಲ್ಲ.' ಯಶೋದೆ ಹೇಳಿದಳು: 'ನೋಡಿಲ್ಲಿ, ನಾನು ಕೇಳಿದ್ದು ನಿಮ್ಮ ಚಿಂತಾಮಣಿಯ ವಿಷಯ ಅಲ್ಲ; ನನ್ನ ಗೋಪಾಲ ಹೇಗಿದ್ದಾನೆ ಎಂಬುದಾಗಿ. ಚಿಂತಾಮಣಿಯನ್ನಲ್ಲ, ನನ್ನ ಗೋಪಾಲನನ್ನು.'

❖ ಗೋಪಿಯರದು ಎಂಥಾ ನಿಷ್ಠೆ ! ಅವರು ಮಥುರೆಗೆ ಹೋಗಿ ದ್ವಾರಪಾಲಕನನ್ನು ಬಹಳವಾಗಿ ಬೇಡಿಕೊಂಡು ಸಭಾಮಂದಿರವನ್ನು ಪ್ರವೇಶಮಾಡಿದರು. ದ್ವಾರಪಾಲಕ ಅವರನ್ನು ಶ್ರೀಕೃಷ್ಣನ ಹತ್ತಿರಕ್ಕೆ ಕರೆದುಕೊಂಡು ಹೋದ. ಆದರೆ ಅಲ್ಲಿ ರುಮಾಲು ಸುತ್ತಿರುವ ಶ್ರೀಕೃಷ್ಣನನ್ನು ಕಂಡು, ತಲೆತಗ್ಗಿಸಿ ತಮ್ಮೊಳಗೇ ಮಾತಾಡಿಕೊಳ್ಳಲಾರಂಭಿಸಿದರು: 'ತಲೆಗೆ ರುಮಾಲು ಸುತ್ತಿ ಕುಳಿತಿದ್ದಾನಲ್ಲ, ಇವನಾರು? ಈತನೊಡನೆ ಮಾತುಕತೆಯಾಡಿ ಕೊನೆಗೆ ನಾವು ಶ್ರೀಕೃಷ್ಣನಲ್ಲಿಟ್ಟಿರುವ ನಿಷ್ಠಾಭಕ್ತಿಯನ್ನು ಕಳೆದುಕೊಳ್ಳೋಣವೆ? ಪೀತಾಂಬರಧಾರಿಯಾದ, ನವಿಲುಗರಿಯ ಕಿರೀಟ ಧರಿಸಿರುವ ನಮ್ಮ ಪ್ರಾಣವಲ್ಲಭ ಶ್ರೀಕೃಷ್ಣನೆಲ್ಲಿ?'

❖ ಒಂದು ಕಥೆ ಕೇಳು. ಮೂರು ಜನ ಸ್ನೇಹಿತರು ಒಂದು ಕಾಡಿನಲ್ಲಿ ಹೋಗುತ್ತಿದ್ದರು. ಇದ್ದಕ್ಕಿದ್ದಂತೆ ಒಂದು ಹುಲಿ ಅಡ್ಡವಾಯಿತು. ಒಬ್ಬ ಹೇಳಿದ: 'ಗೆಳೆಯರಾ, ನಮ್ಮ ಗತಿ ಮುಗಿಯಿತು.' ಎರಡನೆಯವನು ಹೇಳಿದ: 'ಹಾಗೇಕೆ ಹೇಳುತ್ತೀಯೆ? ನಮ್ಮ ಗತಿ ಏಕೆ ಮುಗಿದು ಹೋದೀತು? ಬನ್ನಿ. ಭಗವಂತನನ್ನು ಪ್ರಾರ್ಥಿಸೋಣ.' ಮೂರನೆಯವನು ಹೇಳಿದ: 'ಇದಕ್ಕೆಲ್ಲ ಭಗವಂತನಿಗೇಕೆ ಕಷ್ಟಕೊಡಬೇಕು? ಬನ್ನಿ ಈ ಮರ ಹತ್ತಿಬಿಡೋಣ.' 'ನಮ್ಮ ಗತಿ ಮುಗಿಯಿತು' ಎಂದು ಹೇಳಿದವನಿಗೆ ಗೊತ್ತಿಲ್ಲ, ಭಗವಂತ ನಮ್ಮ ರಕ್ಷಕ ಎಂಬುದು. 'ಭಗವಂತನನ್ನು ಪ್ರಾರ್ಥಿಸೋಣ' ಎಂಬುದಾಗಿ ಹೇಳಿದವ ಜ್ಞಾನಿ. ಜ್ಞಾನಿಗೆ ಗೊತ್ತಿದೆ, ಭಗವಂತ ಸೃಷ್ಟಿ ಸ್ಥಿತಿ ಪ್ರಳಯ ಮಾಡುತ್ತಾನೆ ಎಂದು. ಆದರೆ ಯಾರು 'ಇದಕ್ಕೆಲ್ಲ ಭಗವಂತನಿಗೇಕೆ ಕಷ್ಟಕೊಡಬೇಕು, ಬನ್ನಿ ಈ ಮರ ಹತ್ತಿಬಿಡೋಣ' ಎಂದು ಹೇಳಿದನೋ ಆತನ ಹೃದಯದಲ್ಲಿ ಪ್ರೇಮ ಅಂಕುರಿಸಿದೆ, ಪ್ರೀತಿ ಹುಟ್ಟಿದೆ. ಪ್ರೇಮದ ಸ್ವಭಾವವೇ ಅಂಥದು. ಅದು ತನ್ನ ಪ್ರೀತಿಪಾತ್ರನಿಗಿಂತ ತಾನೇ ಬಲಶಾಲಿ ಎಂಬುದಾಗಿ ಭಾವಿಸುವಂತೆ ಮನುಷ್ಯನನ್ನು ಪ್ರೇರೇಪಿಸುತ್ತದೆ. ಪ್ರೀತಿಪಾತ್ರನಿಗೆ ಯಾವ ತೊಂದರೆಯೂ ಆಗದ ರೀತಿಯಲ್ಲಿ ನೋಡಿಕೊಳ್ಳುತ್ತಾನೆ. ತನ್ನ ಪ್ರೀತಿಪಾತ್ರನ ಕಾಲಿಗೆ ಒಂದು ಮುಳ್ಳೂ ನೆಟ್ಟಕೂಡದು ಎಂಬುದೇ ಆತನ ಹಗಲಿರುಳ ಚಿಂತನೆ.

'ಶ್ರೀರಾಮಕೃಷ್ಣ ವಚನವೇದ'ದಿಂದ